O.S. 162/2016
P.W.1

**ಸಾಕ್ಷಿಯನ್ನು ದಿನಾಂಕಃ 27-02-2025 ರಂದು ಕರೆಯಿಸಿ ಪ್ರಮಾಣ ವಚನ ನೀಡಲಾಯಿತು.**

**ಮುಂದುವರೆದ ಪಾಟೀ ಸವಾಲು ಪ್ರತಿವಾದಿ ಪರ ವಕೀಲರಿಂದಃ**

ನಾನು ದಾವಣಗೆರೆಯಲ್ಲಿ ರೈತರ ಫಸಲುಗಳ ಪರಿವರ್ತಣಾ ಸಹಕಾರಿ ಸಂಘದಲ್ಲಿ ಸೇವ ಸಲ್ಲಿಸಿದ್ದೇನೆ ಎಂದರೆ ಸರಿ. ಸದರಿ ಸಂಘದಲ್ಲಿ ರೈತರಿಗೆ ಸಬ್ಸಿಡಿ ದರದಲ್ಲಿ ಗೊಬ್ಬರವನ್ನು ಪೂರೈಸುವುದು ಮತ್ತು ಬೆಳೆ ಸಾಲವನ್ನು ಮಾಡಲಾಗುತ್ತಿತ್ತು. ಬೆಳೆ ಸಾಲಕ್ಕೆ ಸಂಬಂಧಿಸಿದ ವ್ಯವಹಾರಗಳನ್ನು ನಾನು ನಿರ್ವಹಿಸುತ್ತಿದ್ದನು ಎಂದರೆ ಕಾರ್ಯದರ್ಶಿಗಳು ಸೂಚನೆ ನೀಡದರೆ ನಿರ್ವಹಿಸುತ್ತಿದ್ದೆನು. ನಾನು ಸದರಿ ಸಂಘದಲ್ಲಿ 1975 ನೇ ಸಾಲಿನಿಂದ 2010 ನೇ ಸಾಲಿನವರೆಗೆ ಕೆಲಸ ಮಾಡಿದ್ದೆನು. ಸಂಘದಲ್ಲಿ ಕೆಸಲ ಮಾಡುತ್ತಿದ್ದ ಸಮಯದಲ್ಲಿ ನನಗೆ ಸ್ಟಾಂಪ್ ಪೇಪರ್ ಮತ್ತು ರೆವಿನ್ಯೂ ಸ್ಟಾಂಪ್ ಪೇಪರುಗಳ ಮಾಹಿತಿ ಇತ್ತು ಎಂದರೆ ಸರಿ. ಒಂದು ವಾರದ ಹಿಂದೆ ವ್ಯವಹಾರಕ್ಕೆ ಸಂಬಂಧಿಸಿದಂತೆ ಮಾತುಕತೆ ನಡೆದ ನಂತರ ಸ್ಟಾಂಪ್ ಪೇಪರನ್ನು 1 ನೇ ಪ್ರತಿವಾದಿ ತಂದಿರುವರು. ನಾನು ಆ ಸಮಯದಲ್ಲಿ ಸ್ಟಾಂಪ್ ಪೇಪರನ್ನು ಪರಿಶೀಲನೆ ಮಾಡಿದೆನು. ಅದು ಸರಿ ಇರುತ್ತದೆ ಎಂದು ನನಗೆ ಆಗ ಅನಿಸಿರುತ್ತದೆ.

ಸ್ಟಾಂಪ್ ವೆಂಡರ್ ಯಾರು ಎಂದು ಕೂಡ ಪರಿಶೀಲನೆ ಸರಿಯಾಗಿ ಮಾಡಿರುವುದಿಲ್ಲ. ಪ್ರತಿವಾದಿಗಳು ತಕರಾರು ಸಲ್ಲಿಸಿದ ನಂತರ ನಾನು ಸ್ಟಾಂಪ್ ಪೇಪರನ್ನು ಪರಿಶೀಲನೆ ಮಾಡಿರುವುದಿಲ್ಲ. ಪರವಾನಿಗೆ ಇದ್ದವರು ಮಾತ್ರ ಸ್ಟಾಂಪ್ ಪೇಪರನ್ನು ಮಾರಾಟ ಮಾಡಬಹುದು ಎಂದರೆ ಸರಿ. ಸ್ಟಾಂಪ್ ಪೇಪರಿನಲ್ಲಿ ಜಿ ಆರ್ ವಿಧ್ಯಾಕುಮಾರ್ ಸ್ಟಾಂಪ್ ವೆಂಡರ್ ದಾವಣಗೆರೆ-1 ಎಂದು ಉಲ್ಲೇಖ ಇರುವುದು ಎಂದರೆ ಸರಿ. 1997 ರಲ್ಲಿ ದಾವಣಗೆರೆಯು ಚಿತ್ರದುರ್ಗ ಜಿಲ್ಲೆಯಿಂದ ಬೇರ್ಪಟ್ಟು ಪ್ರತ್ಯೇಕ ಜಿಲ್ಲೆಯಾದ ನಂತರ ದಾವಣಗೆರೆ 2, 3 ಎಂದು ನಂಬರುಗಳು ಬಿದ್ದವು ಎಂದರೆ ಸರಿ. ಸ್ಟಾಂಪ್ ವೆಂಡರ್ ಪರವಾನಿಗೆಯನ್ನು ಜಿಲ್ಲಾ ಖಜಾನೆಯಿಂದ ನೀಡಲಾಗುತ್ತದೆ ಎಂದರೆ ಸರಿ. ಜಿ ಆರ್ ವಿಧ್ಯಾಕುಮಾರ್ ಎಂಬ ಸ್ಟಾಂಪ್ ವೆಂಡರ್ 1991 ರಲ್ಲಿ ಇರಲೇ ಇಲ್ಲ ಎಂದರೆ ನಾನು ಸರಿಯಾಗಿ ಪರಿಶೀಲನೆ ಮಾಡಿರುವುದಿಲ್ಲ. ನಾನು ಹಾಗೂ ಸಾಕ್ಷಿದಾರರು ಸೇರಿಕೊಂಡು 2 ಮತ್ತು 3 ನೇ ಪ್ರತಿವಾದಿಗಳಿಗೆ ತೊಂದರೆ ಕೊಡಲು ಮತ್ತು ದಾವಾ ಆಸ್ತಿಯನ್ನು ಎತ್ತಿಹಾಕಲು ನಿಪಿ-1 ದಾಖಲೆಯನ್ನು ಸೃಷ್ಟಿಸಿದ್ದೇವೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

**ಓ ಹೇ ಕೇ ಸರಿಯಿದೆ.**

27-02-2025

**ಸಿವಿಲ್ ನ್ಯಾಯಾಧೀಶರು ಮತ್ತು**

**ಜೆ.ಎಂ.ಎಫ್.ಸಿ. ಹರಪನಹಳ್ಳಿ**